**ರಾಮಕೃಷ್ಣ ಮಿಷನ್ ಆಶ್ರಮ**

(ರಾಮಕೃಷ್ಣ ಮಿಷನ್, ಬೇಲೂರು ಮಠದ ಒಂದು ಶಾಖಾಕೇಂದ್ರ)

**ಸೆಕ್ಟರ್ 15-ಬಿ, ಮಧ್ಯ ಮಾರ್ಗ**

**ಚಂಡೀಗಢ -160 015**

ಫೋನ್: 0172 - 2549477

E-mail: rkmachandigarh@gmail.com

Website: www.rkmachandigarh.org



ನಿರ್ಮಿಸಲು ಉದ್ದೇಶಿಸಿರುವ '**ವಿಶ್ವಭಾವೈಕ್ಯ ಧ್ಯಾನಮಂದಿರ**' ಹಾಗೂ **ಶೈಕ್ಷಣಿಕ, ಸಾಂಸ್ಕೃತಿಕ ಕೇಂದ್ರ**

# ಒಂದು ವಿನಮ್ರ ವಿನಂತಿ

## ನೂತನ 'ವಿಶ್ವಭಾವೈಕ್ಯ ಧ್ಯಾನಮಂದಿರ' ಹಾಗೂ ಶೈಕ್ಷಣಿಕ, ಸಾಂಸ್ಕೃತಿಕ ಕೇಂದ್ರದ ನಿರ್ಮಾಣ

ಆತ್ಮೀಯ ಭಕ್ತಬಾಂಧವರೇ ಹಾಗೂ ಹಿತೈಷಿಗಳೆ,

ಚಂಡೀಗಢ ರಾಮಕೃಷ್ಣ ಮಿಷನ್ ಆಶ್ರಮವು 1955ರಲ್ಲಿ ಸ್ಥಾಪಿತವಾಯಿತು. ಅಂದಿನಿಂದ ಚಂಡೀಗಢ ಆಶ್ರಮವು ಶಾಂತಿಯನ್ನರಸಿ ಬರುವವರಿಗೆ ಆಧ್ಯಾತ್ಮಿಕ ಪರಿಹಾರ, ನೆಮ್ಮದಿಯನ್ನು ನೀಡುತ್ತಾ ಬಂದಿದೆ; ಅದಲ್ಲದೆ ಉಚಿತ ವೈದ್ಯಕೀಯ ಸೇವೆ, ಕಾಲೇಜು ವಿದ್ಯಾರ್ಥಿಗಳಿಗಾಗಿ 'ವಿವೇಕಾನಂದ ಸ್ಟೂಡೆಂಟ್ ಹೋಮ್' ಎಂಬ ವಿದ್ಯಾರ್ಥಿ ನಿಲಯ, ಶಾಲೆ-ಕಾಲೇಜುಗಳಿಗೆ ಮೌಲ್ಯಶಿಕ್ಷಣ ಕಾರ್ಯಕ್ರಮಗಳು, ಪ್ರೇರಣಾತ್ಮಕ ಹಾಗೂ ಉನ್ನತ ಮೌಲ್ಯಗಳನ್ನು ಹರಡುವ ಸಾಹಿತ್ಯದ ಪ್ರಸರಣ - ಇವೇ ಮೊದಲಾದ ಚಟುವಟಿಕೆಗಳನ್ನು ನಡೆಸುತ್ತಿದೆ.

ಕಳೆದ ಎರಡು ದಶಕಗಳಿಂದ ಈ ಸೇವಾಕಾರ್ಯಗಳು ಸುಸ್ಥಿರವಾಗಿ ವ್ಯಾಪಕಗೊಳ್ಳುತ್ತಿವೆ. ಆಶ್ರಮಕ್ಕೆ ಆಗಮಿಸುವ, ಇಲ್ಲಿನ ದೈನಂದಿನ ಚಟುವಟಿಕೆಗಳಾದ ಬೆಳಗಿನ ಮಂಗಳಾರತಿ, ಸಂಧ್ಯಾರತಿಗಳಲ್ಲಿ ಪಾಲ್ಗೊಳ್ಳುವ ಹಾಗೂ ಇಲ್ಲಿ ನಡೆಯುವ ಧ್ಯಾನ, ತರಬೇತಿ ಶಿಬಿರ, ಸತ್ಸಂಗ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಭಕ್ತರ ಸಂಖ್ಯೆ ಗಣನೀಯವಾಗಿ ವೃದ್ಧಿಗೊಂಡಿದೆ.

ಹೊಸ ಅಗತ್ಯಗಳಿಗೆ ಅನುಗುಣವಾಗಿ ಆಶ್ರಮದಲ್ಲಿ ಈ ಕೆಳಗಿನ ಹೊಸ ಕಟ್ಟಡಗಳ ನಿರ್ಮಾಣ ಮಾಡಲು ನಿರ್ಧರಿಸಲಾಗಿದೆ:

| | | |
|---|---|---|
| 1) ವಿಶಾಲವಾದ ಧ್ಯಾನಮಂದಿರ ಹಾಗೂ ಸಾಧುನಿವಾಸ | - | 1.3 ಕೋಟಿ ರೂಪಾಯಿ ಅಂದಾಜು ವೆಚ್ಚ |
| 2) ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರ | - | 2.1 ಕೋಟಿ ರೂಪಾಯಿ ಅಂದಾಜು ವೆಚ್ಚ |
| **ಈ ಯೋಜನೆಗೆ ತಗಲಬಹುದಾದ ಒಟ್ಟು ಮೊತ್ತ** | **-** | **3.4 ಕೋಟಿ ರೂಪಾಯಿ ಅಂದಾಜು ವೆಚ್ಚ** |



ರಾಮಕೃಷ್ಣ ಮಹಾಸಂಘದ 11ನೇ ಪರಮಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ಗಂಭೀರಾನಂದಜಿ ಮಹಾರಾಜ್ ಅವರು 1985ರ ನವಂಬರ್ 24ರಂದು 'ವಿಶ್ವಭಾವೈಕ್ಯ ಧ್ಯಾನಮಂದಿರ'ದ ಶಿಲಾನ್ಯಾಸ ಕಾರ್ಯಕ್ರಮ ನೆರವೇರಿಸುತ್ತಿರುವುದು.



ನೂತನ 'ವಿಶ್ವಭಾವೈಕ್ಯ ಧ್ಯಾನಮಂದಿರ' ಹಾಗೂ ಶೈಕ್ಷಣಿಕ, ಸಾಂಸ್ಕೃತಿಕ ಕೇಂದ್ರದ ನಿರ್ಮಾಣಕಾರ್ಯ ಪ್ರಗತಿಯಲ್ಲಿರುವುದು.

ಈ ಕಾರ್ಯಕ್ಕೆ ದೇಣಿಗೆ ನೀಡಬಯಸುವವರು ಚೆಕ್, ಡಿಡಿ ಇವುಗಳನ್ನು '**RAMAKRISHNA MISSION ASHRAMA, CHANDIGARH**' ಹೆಸರಿನಲ್ಲಿ ತೆಗೆದು, ಆಶ್ರಮದ ವಿಳಾಸಕ್ಕೆ ಕೊರಿಯರ್, ತ್ವರಿತ ಅಂಚೆ (speed post) ಅಥವಾ ರಿಜಿಸ್ಟರ್ಡ್ ಅಂಚೆ ಮೂಲಕ ಕಳುಹಿಸಬಹುದು. ನೇರವಾಗಿ ಬ್ಯಾಂಕಿಗೆ ಹಣ ವರ್ಗಾವಣೆ ಮಾಡುವವರಿಗೆ ಖಾತೆ ವಿವರಗಳು:

**1. ICICI A/c No. - 001301029198, Branch - Sector 15-C, Chandigarh, IFSC - ICIC0002429**

**2. IDBI A/c No. - 003104000083216, Branch - Sector 8-C, Chandigarh, IFSC - IBKL0000003**

(ದಯವಿಟ್ಟು ಹಣ ವರ್ಗಾವಣೆ ಮಾಡಿದ ವಿವರ, ನಿಮ್ಮ ವಿಳಾಸ, ಫೋನ್ ನಂ. ಇವುಗಳನ್ನು ಅದೇ ದಿನದಂದು ಇ-ಮೇಲ್ ಮೂಲಕ ನಮಗೆ ತಿಳಿಸಬೇಕಾಗಿ ವಿನಂತಿ)

*ಆಶ್ರಮದ ವಿಳಾಸ:*

**Ramakrishna Mission Ashrama, Sector 15-B, Madhya Marg, Chandigarh - 160015**

Tel: 0172-2549477 E-mail: rkmachandigarh@gmail.com

ಭಗವಾನ್ ಶ್ರೀರಾಮಕೃಷ್ಣರ ಸೇವೆಯಲ್ಲಿ

ಸ್ವಾಮಿ ಸತ್ಯೇಶಾನಂದ

ಕಾರ್ಯದರ್ಶಿಗಳು, ರಾಮಕೃಷ್ಣ ಮಿಷನ್ ಆಶ್ರಮ, ಚಂಡೀಗಢ



### ಸಂಪಾದಕೀಯ

# ಸ್ವಾತಂತ್ರ್ಯದ ಮುಂಬೆಳಗು

ಆಗಸ್ಟ್ ತಿಂಗಳು ಬಂತೆಂದರೆ ನಮ್ಮ ದೇಶದೆಲ್ಲೆಡೆ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮ ವ್ಯಾಪಿಸುತ್ತದೆ. ಶಾಲೆ, ಕಾಲೇಜು, ಕಛೇರಿ, ಸಾರ್ವಜನಿಕ ವೇದಿಕೆಗಳಲ್ಲೆಲ್ಲ ಹಲವು ಕಾರ್ಯಕ್ರಮಗಳು ನಡೆಯುತ್ತವೆ. ಪ್ರತಿ ವರ್ಷವೂ ಗಣ್ಯರು ಭಾಷಣ ಮಾಡುತ್ತಾರೆ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾತ್ಮರನ್ನು ನೆನಪಿಸಿಕೊಳ್ಳುತ್ತೇವೆ, ನಮ್ಮ ದೇಶಭಕ್ತಿಯನ್ನು ಈ ಮೂಲಕ ಗುರುತಿಸಿಕೊಳ್ಳುತ್ತೇವೆ. ಬಾಲ್ಯದಿಂದಲೇ ಇವನ್ನೆಲ್ಲ ಕಂಡು, ಸಕ್ರಿಯವಾಗಿ ಭಾಗವಹಿಸಿ, ನಮ್ಮ ನಾಡಿನ ಈ ಸಡಗರದ ಆಚರಣೆಯು ನಮಗೆ ಅತ್ಯಂತ ಸಹಜವೆಂದೇ ಕಂಡುಬರುತ್ತಿದೆ. ನಾವೆಲ್ಲ ಇದನ್ನು ನಮ್ಮ ಜೀವನದ ಅಂಗವೆಂದೇ ಸ್ವೀಕರಿಸಿದ್ದೇವೆ. ಆದರೆ ಸ್ವಾತಂತ್ರ್ಯವೆಂಬ ಕಲ್ಪನೆಯ ಮೂಲ ಯಾವುದು, ಅದರ ವ್ಯಾಪ್ತಿ ಎಷ್ಟು, ಅದರ ಅನಿವಾರ್ಯತೆ ಎಷ್ಟರಮಟ್ಟಿನದು ಈ ಪ್ರಶ್ನೆಗಳನ್ನು ಹಾಕಿಕೊಳ್ಳುವುದೂ ಅಷ್ಟೇ ಅಗತ್ಯ.

ನಾವು ಆಚರಿಸುವ ಸ್ವಾತಂತ್ರ್ಯ ಪ್ರಧಾನವಾಗಿ ರಾಜಕೀಯ ನೆಲೆಯದ್ದು. ಅದು ನಮ್ಮ ರಾಷ್ಟ್ರೀಯತೆಯ ಹೆಗ್ಗುರುತಾಗಿದೆ. ನಮ್ಮನ್ನು ನಾವೇ ಆಳುವ, ನಮ್ಮದೇ ನಿಯಮಾಳಿಗಳಿಗೆ ಅನುಸಾರವಾಗಿ ಆಡಳಿತವನ್ನು ನಡೆಸುವ ಒಂದು ಸಂವಿಧಾನ ನಮ್ಮ ಸ್ವತಂತ್ರ ದೇಶಕ್ಕಿದೆ. ನಮ್ಮ ಜನಜೀವನದಲ್ಲಿ ಅತ್ಯಂತ ಪ್ರಧಾನ ಪಾತ್ರ ವಹಿಸುವ ಈ ರಾಷ್ಟ್ರೀಯ ಭಾವನೆಗೆ ಕಾನೂನು, ಆಡಳಿತ, ಹಾಗೂ ಸಂವಿಧಾನಾತ್ಮಕ ಬೆಂಬಲವೂ ದೊರೆತು, ಈ ಚೌಕಟ್ಟಿನಲ್ಲಿ ನಮ್ಮ ಜನಜೀವನವನ್ನು ರೂಪಿಸಿಕೊಳ್ಳುವ ಕ್ರಮವೇ ಸ್ವಾತಂತ್ರ್ಯದ ಲೌಕಿಕ ಅರ್ಥವಾಗಿದೆ. ಈ ಅರ್ಥದಲ್ಲಿ ಪ್ರತಿಯೊಬ್ಬನ ಸ್ವಾತಂತ್ರ್ಯವನ್ನು ರೂಪಿಸುವುದು ರಾಷ್ಟ್ರೀಯ ನೆಲೆಯ ಈ ರಾಜಕೀಯ ವ್ಯವಸ್ಥೆಯಾಗಿದ್ದರೂ, ನಮ್ಮ ಜೀವನ ಅದರಾಚೆಗೂ ವಿಸ್ತರಿಸಿಕೊಂಡಿರುವುದರಿಂದ ಸ್ವಾತಂತ್ರ್ಯದ ಅರ್ಥವನ್ನು ಬೇರೆ ನೆಲೆಗಳಲ್ಲೂ ಕಂಡುಕೊಳ್ಳುವುದು ಸಾಧ್ಯವಿದೆ.

## ಜೀವನದ ವಿವಿಧ ನೆಲೆಗಳಲ್ಲಿ

ಮೇಲೆ ಹೇಳಿದಂತೆ, ರಾಜಕೀಯ-ಆಡಳಿತಾತ್ಮಕ ದೃಷ್ಟಿಕೋನದ ಸ್ವಾತಂತ್ರವು ಎಷ್ಟೇ ಪ್ರಭಾವಶಾಲಿಯಾಗಿದ್ದರೂ, ನಮ್ಮ ಜೀವನ ಅಂತಿಮವಾಗಿ ನಡೆಯುವುದು ವೈಯಕ್ತಿಕ ನೆಲೆಯಲ್ಲೇ. ಆದ್ದರಿಂದ ಒಬ್ಬನ ವ್ಯಕ್ತಿಗತ ಜೀವನದಲ್ಲಿ ಸ್ವಾತಂತ್ರ್ಯದ ಪಾತ್ರವೆಂಥದು? ಯಾವ ಬಗೆಯ ಸ್ವಾತಂತ್ರ್ಯವನ್ನು ಒಬ್ಬನು ಬಯಸುತ್ತಾನೆ? ಅವನ ಸ್ವಾತಂತ್ರ್ಯದ ಮಿತಿ, ವ್ಯಾಪ್ತಿ ಎಲ್ಲಿಯವರೆಗೆ – ಎಂದು ರಾಜಕೀಯ ವ್ಯವಸ್ಥೆ ಸಂಪೂರ್ಣವಾಗಿ ನಿರ್ಧರಿಸದು. ದೇಶದ ಸುರಕ್ಷಿತತೆ, ಸಾಮಾಜಿಕ ನಿಯಮಗಳಿಗೆ ಭಂಗ ಬಾರದಂತೆ, ಇತರ ಪ್ರಜೆಗಳ ಸೌಹಾರ್ದಯುತ ಜೀವನಕ್ಕೆ ತೊಂದರೆಯಾಗದಂತೆ ನಿಮ್ಮ ಸ್ವಾತಂತ್ರ್ಯವನ್ನು ಬಳಸಿಕೊಳ್ಳಬಹುದು ಎಂಬುದು ಯಾವುದೇ ಆಡಳಿತ ವ್ಯವಸ್ಥೆಯ ಬದ್ಧತೆಯಾಗಿರುತ್ತದೆ. ಆದರೆ ಸಾಮಾಜಿಕ ಕಟ್ಟುಪಾಡುಗಳು, ಧಾರ್ಮಿಕ ವಿಧಿವಿಧಾನಗಳು, ನೈತಿಕ ಆದರ್ಶಗಳು ಹಾಗೂ ವ್ಯಕ್ತಿಗತ ತತ್ತ್ವಗಳು ಪ್ರತಿಯೊಬ್ಬ ವ್ಯಕ್ತಿಯ ಸ್ವಾತಂತ್ರ್ಯವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ರಾಜಕೀಯ ವಲಯದಾಚೆಗೂ ವಿಸ್ತರಿಸಿರುವ ಸ್ವಾತಂತ್ರ್ಯದ ಅರ್ಥವನ್ನು ಇವು ಸೂಚಿಸುತ್ತವೆ.

ಕೆಲವೊಮ್ಮೆ ಸ್ವಾತಂತ್ರ್ಯದ ಇತಿಮಿತಿ, ಅರ್ಥವ್ಯಾಪ್ತಿ ಅರ್ಥವಾಗದೆ ಗೊಂದಲವುಂಟಾಗುವ ಸಂದರ್ಭ ಒದಗಿ ಬರುತ್ತದೆ. ಉದಾಹರಣೆಗೆ, ಇತ್ತೀಚೆಗೆ ಹೆಚ್ಚು ಚರ್ಚೆಗೊಳಗಾಗಿರುವ ಮಹಿಳೆಯರ ಸ್ವಾತಂತ್ರ್ಯದ ವಿಚಾರ. ದೇಶಕ್ಕೇನೋ ಸ್ವಾತಂತ್ರ್ಯ ಬಂತು, ಆದರೆ ನಿಜವಾಗಿಯೂ ಸ್ತ್ರೀ ಸ್ವತಂತ್ರಳಾಗಿರುವಳೆ? ಎಂದು ಹಲವರು ಪ್ರಶ್ನಿಸುತ್ತಾರೆ. ಇದರರ್ಥ, ಸ್ವಾತಂತ್ರ್ಯ ಕೇವಲ ರಾಜಕೀಯವಾಗಿ ಇದ್ದರೆ ಸಾಲದು, ಸಾಮಾಜಿಕವಾಗಿಯೂ ಇರಬೇಕು; ಆಗ ಮಾತ್ರ ಅದು ನಿಜವಾದ ಸ್ವಾತಂತ್ರ್ಯವೆನ್ನಿಸುವುದು. ಅದೇ ರೀತಿ, ಸ್ವಾತಂತ್ರ್ಯದ ಹೆಸರಿನಲ್ಲಿ ಇತರರ ಜೀವನಕ್ಕೆ ಧಕ್ಕೆಯಾಗುವಂತೆ

ವರ್ತಿಸುವಾಗ, 'ಸ್ವತಂತ್ರ ಭಾರತದಲ್ಲಿ ನಾನು ಏನು ಬೇಕಾದರೂ ಮಾಡಬಹುದು' ಎಂಬ ವಾದ ಹೂಡುವ ಪ್ರವೃತ್ತಿ ಕಂಡುಬರುತ್ತದೆ. ಇನ್ನೊಂದೆಡೆ ವಾಕ್ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯಗಳ ವಿಚಾರವಾಗಿ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಅನೇಕ ಬಾರಿ ಈ ವಿಭಿನ್ನ ನೆಲೆಗಳ ಸ್ವಾತಂತ್ರ್ಯವನ್ನು ಕಾನೂನು ಅಥವಾ ಸಂವಿಧಾನ ನಿರ್ವಚಿಸುವುದಿಲ್ಲ; ಅವುಗಳ ಇತಿಮಿತಿಯನ್ನು ಅದು ನಿರ್ಧರಿಸುವುದಿಲ್ಲ. ನಮ್ಮ ಸಮಾಜ, ನಮ್ಮ ಜನಜೀವನದ ಸಂಕೀರ್ಣವಾಗುತ್ತ ಹೋದಷ್ಟೂ ಸ್ವಾತಂತ್ರ್ಯವನ್ನು ಕುರಿತ ಗೊಂದಲಗಳು ದಿನೇ ದಿನೇ ವೃದ್ಧಿಯಾಗುತ್ತಿವೆ. ಇವೆಲ್ಲದರ ನಡುವೆ, ಜೀವನಕ್ಕೆ ಸ್ವಾತಂತ್ರ್ಯದ ಉಪಯುಕ್ತತೆಯೇನು ಎಂಬುದನ್ನೇ ನಾವು ಕಾಣದೆ ಹೋಗುತ್ತೇವೆ. ಜೀವನವನ್ನು ಸಮಗ್ರ ದೃಷ್ಟಿಯಿಂದ ಚಿಂತಿಸಿದಾಗ ಮಾತ್ರ ಸ್ವಾತಂತ್ರ್ಯದ ಮಹತ್ವ ಮನಗಾಣುವುದು.

### ಸ್ವಾತಂತ್ರ್ಯದ ತತ್ತ್ವವೇನು?

ಜಗತ್ತಿನ ಶ್ರೇಷ್ಠ ಚಿಂತಕರೆಲ್ಲ ಸ್ವಾತಂತ್ರ್ಯವನ್ನು ಕುರಿತು ಹಲವು ಮಾತುಗಳನ್ನಾಡಿದ್ದಾರೆ. ಅವುಗಳ ಹಿಂದೆ ಅವರ ವಿಚಾರ, ತತ್ತ್ವ ನಂಬಿಕೆಗಳು ಕೆಲಸ ಮಾಡಿರುವುದರಿಂದ, ಎಲ್ಲೂ ಏಕಭಿಪ್ರಾಯ ಕಂಡುಬರುವುದಿಲ್ಲ. ಆದರೆ ತತ್ತ್ವವೆಂದಾಗ ದೃಷ್ಟಿಕೋನಗಳು ಹಲವು ಇರಬಹುದು; ಆದರೆ ತತ್ತ್ವವೆಂಬುದು ತನ್ನ ನಿಲುವಿನಲ್ಲಿ ಏಕೈಕವಾಗಿ ನಿಲ್ಲುವುದು. ''ತಾನು ಬದುಕುವುದು; ಇತರರನ್ನು ಬದುಕಲು ಬಿಡುವುದು'' ಎಂಬ ತತ್ತ್ವವು ಸ್ವಾತಂತ್ರ್ಯವೆಂಬ ಕಲ್ಪನೆಗೆ ಒಂದು ಸಮಗ್ರ ದೃಷ್ಟಿಕೋನವನ್ನು ನೀಡುತ್ತದೆ. ರಾಜಕೀಯ, ಸಾಮಾಜಿಕ, ಧಾರ್ಮಿಕ, ನೈತಿಕ ಅಥವಾ ಇನ್ನಾವುದೇ ನೆಲೆಯಲ್ಲಿ ಈ ಮಾತು (ಅಥವಾ ತತ್ತ್ವ) ಸಮರ್ಥವಾದ ಒಂದು ವಿವರಣೆಯಾಗಿ ಕಂಡುಬರುತ್ತದೆ. ವಿವಿಧ ಕ್ಷೇತ್ರಗಳಲ್ಲಿ ಇದನ್ನು ಅನ್ವಯಿಸುವಾಗಲೇ ಹೆಚ್ಚಿನ ವಿವರಣೆ, ವ್ಯಾಖ್ಯಾನಗಳು ಅಗತ್ಯವೆನಿಸುತ್ತದೆ. ಸ್ವಾತಂತ್ರ್ಯವೆಂಬ ಭಾವನೆಗೆ ಪ್ರೇರಕವಾಗಿ ನಿಂತ ಸಂಗತಿಗಳೇನು? ಅವನ್ನು ಹೀಗೆ ಗುರುತಿಸಬಹುದು. ೧) ಶಾಂತಿ, ಆನಂದ, ನೆಮ್ಮದಿ, ಸಾಮರಸ್ಯದ ಜೀವನ. ೨) ವ್ಯಕ್ತಿ ಹಾಗೂ ಸಮಾಜ ಇವೆರಡರ ಸಂಬಂಧ ಎಲ್ಲ ನೆಲೆಗಳಲ್ಲೂ ಪ್ರಧಾನವಾದ್ದರಿಂದ, ವ್ಯಕ್ತಿ ಸ್ವಾತಂತ್ರ್ಯದ ಮಿತಿಯನ್ನು ಸಮಾಜವೇ ರೂಪಿಸುವುದು. ೩) ತನ್ನ ಸ್ವಾತಂತ್ರ್ಯದ ಮಿತಿಯೊಳಗೆ ವ್ಯಕ್ತಿಯು ತನ್ನ ಜೀವನ, ಕ್ರಿಯಾಶೀಲತೆ, ನೆಮ್ಮದಿಯನ್ನು ಕಂಡುಕೊಳ್ಳುವುದೇ ಸ್ವಾತಂತ್ರ್ಯ. ೪) ವ್ಯಕ್ತಿ ಹಾಗೂ ಸಮಾಜದ ನಡುವೆ ಸ್ವಾತಂತ್ರ್ಯದ ಪರಿಪಾಲನೆ ಸೂಕ್ತವಾಗಿ ಪರಿಪಾಲನೆಯಾಗುವಂತೆ ನೋಡಿಕೊಳ್ಳುವ ಜವಾಬ್ದಾರಿಯೇ ಆಡಳಿತ. ೫) ಸಮರ್ಪಕ ಆಡಳಿತದ ಪರಿಣಾಮವೇ ಸ್ವತಂತ್ರ ಪ್ರಜಾರಾಜ್ಯ.

ಹೀಗೆ ವ್ಯಕ್ತಿ-ಸಮಾಜ-ಆಡಳಿತ-ರಾಷ್ಟ್ರ ಎಂಬಂತೆ ಸ್ವಾತಂತ್ರ್ಯದ ಭಾವನೆ ವಿಕಾಸ ಹೊಂದುವುದು. ಸಮತೋಲನವೆಂಬುದು ಪ್ರಪಂಚದ ನಿಯಮ; ಸ್ವಾತಂತ್ರ್ಯದ ಈ ವಿವಿಧ ನೆಲೆಗಳಲ್ಲಿ ಸಮತೋಲನವಿದ್ದಾಗಲೇ ಅದು ಅರ್ಥವತ್ತಾಗುವುದು.

ಆದರೆ ಈ ಭಾವನೆಗಳೆಲ್ಲವೂ ಲೌಕಿಕ ಪ್ರಪಂಚದ ದೃಷ್ಟಿಯಲ್ಲಿ ಚರ್ಚಿಸಬಹುದಾದ ಸ್ವಾತಂತ್ರ್ಯದ ಅರ್ಥ. ಇತರರ ಹಂಗಿಗೆ ಒಳಗಾಗದ, ಇತರರ ನಿಯಂತ್ರಣಕ್ಕೆ ಒಳಗಾಗದ ಸ್ವತಂತ್ರ ಜೀವನವನ್ನು ಪ್ರತಿಯೊಬ್ಬ ವ್ಯಕ್ತಿಯೂ ಬಯಸಬೇಕು; ಅದನ್ನು ಅವನು ಬಾಲ್ಯದಿಂದಲೇ ಕಲಿಯುತ್ತಾನೆ. ಎಲ್ಲಿ ಅಂತಹ ಕಲಿಕೆ ಅಲಭ್ಯವೋ, ಇತರರ ಅಧೀನದಲ್ಲಿ ಬದುಕುವುದೇ ಜೀವನವೆಂದು ಕಲಿಸಲಾಗುತ್ತದೋ, ಅದಕ್ಕೂ ದಾಸ್ಯಕ್ಕೂ ವ್ಯತ್ಯಾಸವಿಲ್ಲ. ಅನೇಕ ಜನಾಂಗಗಳು, ಜಾತಿಗಳು ಹಾಗೂ ದೇಶಗಳು ಇಂಥ ದಾಸ್ಯಕ್ಕೆ ಒಳಗಾಗಿದ್ದುದರಿಂದಲೇ ಅನೇಕ ದುರಂತಗಳು ನಡೆದವು. ಈಗಲೂ ಪ್ರಪಂಚದಲ್ಲಿ ಹಲವೆಡೆ ಈ ಬಗೆಯ ದಾಸ್ಯ ಅಸ್ತಿತ್ವದಲ್ಲಿರುವುದು ಅತ್ಯಂತ ಕಳವಳಕಾರಿಯಾದ ವಿಚಾರ. ಸ್ವಾತಂತ್ರ್ಯದ ಅರಿವು ಮೂಡುವುದು, ಮೂಡಿಸುವುದು ಹಾಗೂ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ಯಾವುದೇ ಜೀವಂತ ಸಮಾಜದ ಆರೋಗ್ಯಕರ ಕ್ರಿಯೆಯಾಗಿದೆ. ಇದರಿಂದ ಲಭಿಸುವ ಸ್ವಾತಂತ್ರ್ಯವೇ ಜನಾಂಗಕ್ಕೆ ಶಕ್ತಿ, ಸ್ಫೂರ್ತಿ, ಪ್ರೇರಣೆ, ಆನಂದಗಳನ್ನು ನೀಡುವುದು. ಈ ಹಿನ್ನೆಲೆಯೊಂದಿಗೆ ನಮ್ಮ ಸ್ವಾತಂತ್ರ್ಯ ದಿನಾಚರಣೆಗಳನ್ನು ನಾವು ನೋಡಬೇಕು; ನಮ್ಮ ರಾಷ್ಟ್ರೀಯ ಉತ್ಸವದ ಆನಂದದಲ್ಲಿ ಭಾಗಿಯಾಗಬೇಕು.

### ಆಧ್ಯಾತ್ಮಿಕ ನೆಲೆಯಲ್ಲಿ ಸ್ವಾತಂತ್ರ್ಯ

ಸ್ವಾತಂತ್ರ್ಯದ ಕಲ್ಪನೆಗೆ ಲೌಕಿಕ ಜಗತ್ತನ್ನು ಮೀರಿದ ಆಧ್ಯಾತ್ಮಿಕ ಆಯಾಮವಿಲ್ಲವೆ? ಒಂದು ದೃಷ್ಟಿಯಲ್ಲಿ ನೋಡುವಾಗ ನಮಗೆ ನಿಜವಾದ ಸ್ವಾತಂತ್ರ್ಯವಿರುವುದು ಆಧ್ಯಾತ್ಮಿಕತೆಯಲ್ಲಿ ಮಾತ್ರ. ಆತ್ಮವು ಯಾವುದೇ ಕಟ್ಟುಪಾಡು, ನೀತಿ-ನಿಯಮ, ನಿಬಂಧನೆಗೂ ಒಳಗಾಗದ, ಸರ್ವತಂತ್ರ ಸ್ವತಂತ್ರವಾದ ಒಂದು ಅಸ್ತಿತ್ವವೆಂದೂ, ಪ್ರತಿಯೊಂದು ಜೀವಿ ಹಾಗೂ ಜಡವಸ್ತುಗಳ ಅಂತರಂಗದಲ್ಲಿ ಆತ್ಮವೇ ತುಂಬಿಕೊಂಡಿದೆಯೆಂದೂ ನಮ್ಮ ಆಧ್ಯಾತ್ಮಿಕ ಪರಂಪರೆ ಸಾರುತ್ತದೆ. ಇಂಥ ಆತ್ಮವಸ್ತುವನ್ನು ಕಂಡುಕೊಂಡಾಗಲೇ ನಾವು ಎಲ್ಲ ಬಂಧನಗಳಿಂದ ಬಿಡುಗಡೆ ಹೊಂದುವೆವು. ಅಲ್ಲಿಯವರೆಗೂ ನಾವು ನಮ್ಮನ್ನು ಬಂಧಿಸುವ ಅಜ್ಞಾನ, ಕರ್ಮ, ಸಂಸ್ಕಾರ, ವಿಷಯವಾಸನೆ ಮೊದಲಾದ ಉಪಾಧಿಗಳಿಂದ ಪೀಡಿತರಾಗಿರುತ್ತೇವೆ; ಸುಖ-ದುಃಖ, ಜನನ-ಮರಣಗಳೇ ಮೊದಲಾದ ದ್ವಂದ್ವಗಳಿಂದ ತೊಳಲಾಡುತ್ತಿರುತ್ತೇವೆ. ಆತ್ಮಜ್ಞಾನವೊಂದೇ ಈ ಬಂಧನಗಳನ್ನೆಲ್ಲ ಕಿತ್ತೊಗೆದು, ಇನ್ನೆಂದಿಗೂ ಈ ಕಷ್ಟಪರಂಪರೆಗೆ ಮರಳದಂತೆ ಮುಕ್ತಿಯ ನೆಲೆಯನ್ನು ನಮಗೆ ನೀಡುವುದು. ಈ ಬಗೆಯ ಸಾಕ್ಷಾತ್ಕಾರವೇ ಎಲ್ಲ ಆಧ್ಯಾತ್ಮಿಕತೆಯ, ಎಲ್ಲ ಧರ್ಮಗಳ ಗುರಿ. ಇದು ಪ್ರತಿಯೊಬ್ಬ ಮಾನವನ ಗುರಿಯೆಂದು ಶ್ರೀರಾಮಕೃಷ್ಣರು ಸಾರಿದರು. ಇಂತಹ ಮುಕ್ತಿಯನ್ನು ಪಡೆದಾಗಲೇ ನಮಗೆ ನಿಜವಾದ ಸ್ವಾತಂತ್ರ್ಯ ದೊರಕುವುದು. ಅಲ್ಲಿಯ ತನಕ ಸ್ವಾತಂತ್ರ್ಯವೆಂದರೆ ಕೇವಲ ಭ್ರಮೆ; ನಮ್ಮ ದೇಹ, ಇಂದ್ರಿಯ, ಮನಸ್ಸುಗಳು ನಮ್ಮನ್ನು ಯಾವಾಗಲೂ ಪ್ರಪಂಚದೆಡೆಗೆ ಸೆಳೆಯುತ್ತಿರುವಾಗ ನಾವೆಷ್ಟು ಸ್ವತಂತ್ರರು? ಆದ್ದರಿಂದ ಎಲ್ಲ ಬಂಧನಗಳಿಂದಲೂ ಬಿಡುಗಡೆ ಹೊಂದಿ ಆತ್ಮನನ್ನು ಕಾಣಬೇಕೆಂದು ವೇದಾಂತ ತತ್ತ್ವ ಪ್ರತಿಪಾದಿಸುತ್ತದೆ. **'ನಿಸ್ತ್ರೈಗುಣ್ಯೇ ಪಥಿ ವಿಚರತಾಂ ಕೋ ವಿಧಿಃ ಕೋ ನಿಷೇಧಃ?'** (ತ್ರಿಗುಣಗಳನ್ನು ದಾಟಿ ಮುಂದಕ್ಕೆ ಸಾಗುತ್ತಿರುವವನಿಗೆ ವಿಧಿ, ನಿಷೇಧಗಳೆಲ್ಲಿ